# ಆಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಆಳಂದ

ಸಿ.ಸಿ.ನಂ.6558/2024

**ಸರ್ಕಾರದ ಪರವಾಗಿ ನರೋಣಾ ಪೋಲಿಸ ಠಾಣೆ**

**ವಿರುದ್ಧ**

**ಪ್ರೇಮಸಿಂಗ ತಂದೆ ಭೀಮಶ್ಯಾ ಜಾಧವ,**

ವಃ 51 ವರ್ಷ, ಉಃ ಚಾಲಕ,

ಸಾಃ ದಣ್ಣೂರ ತಾಂಡಾ, ತಾಃ ಆಳಂದ, ಜಿಃ ಕಲಬುರಗಿ.

## ಆಪಾಧನೆ

## ಶ್ರೀ.ಸುಮನ ಚಿತ್ತರಗಿ, ಅಪರ ನ್ಯಾ.ದಂ.ಗಳು, ಆಳಂದ ನಾನು ನಿಮ್ಮ ವಿರುದ್ಧ ಈ ಕೆಳಕಾಣಿಸಿದ ಅಪಾದನೆಗಳನ್ನು ರೂಪಿಸುತ್ತಿದ್ದೇನೆ.

ನರೋಣಾ ಪೋಲಿಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ವಿ.ಕೆ.ಸಲಗರ-ಮಹಾಗಾಂವ ಮುಖ್ಯ ರಸ್ತೆಯ ಮಾರ್ಗ ಮದ್ಯ ಮಡಕಿ ಗ್ರಾಮದ ಸೀಮಾಂತರದಲ್ಲಿರುವ ಮಡಕಿ ತಾಂಡಾದ ಸುಮಾರು ಒಂದು ಕಿಲೋ ಮೀಟರ ಅಂತರದಲ್ಲಿ ರಸ್ತೆಯ ಮೇಲೆ ದಿಃ 22.03.2024 ರಂದು ರಾತ್ರಿ 8.30 ಗಂಟೆಗೆ ಸಾಕ್ಷಿ ನಂ.1 ರವರ ಗಂಡನಾದ ವೀರಯ್ಯಾ ತಂದೆ ಚೆನ್ನಯ್ಯಾ ಮಠಪತಿ ಇವರು ಹಿರೋ ಹೆಚ್.ಎಫ್. ಡೀಲೇಕ್ಸ್ ಮೋಟಾರ ಸೈಕಲ್ ನಂ.ಕೆಎ-56-ಹೆಚ್-5447 ರಲ್ಲಿ ಸಂಬಂಧಿಕರ ಕಾರ್ಯಕ್ರಮ ನಿಮಿತ್ಯ ರಟಕಲ್ ರೇವಣಸಿದ್ದೇಶ್ವರ ದೇವಸ್ಥಾನದ ವಾಘದರಿ ಗ್ರಾಮದಿಂದ ವಿ.ಕೆ. ಸಲಗರ ಮಾರ್ಗವಾಗಿ ಹೋಗುವಾಗ ಎದುರುಗಡೆ ಮಾಹಾಗಾಂವ ಕ್ರಾಸ ಕಡೆಯಿಂದ ಆರೋಪಿತನಾದ ನೀವು ಸಾಕ್ಷಿ ನಂ.12 ನೇದ್ದವರ ಹೆಸರಿನಲ್ಲಿರುವರ ಮಹೇಂದ್ರ ಬೊಲೆರೊ ಪೀಕಪ್ ವಾಹನ ನಂ.ಕೆಎ-56-5459 ಮೇಲೆ ಅತೀವೇಗ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ವೀರಯ್ಯಾ ಇವರು ಮೋಟಾರ ಸೈಕಲಕ್ಕೆ ಡಿಕ್ಕಿ ಪಾಡಿಸಿದಾಗ ವೀರಯ್ಯಾ ರವರಿಗೆ ತಲೆಯಿಂದ ಗದ್ದದವರಗೆ ಒಡೆದು ಭಾರಿ ರಕ್ತಗಾಯವಾಗಿ ಮೆದುಳು ಹೊರಗೆ ಬಿದ್ದಿರುತ್ತದೆ ನಂತರ ಬಲಗೈ, ಮೊಳಕೈ ಹತ್ತಿರ ಭಾರಿ ರಕ್ತಗಾಯವಾಗಿ ಕೈ ಮುರಿದಿದ್ದು, ಬಲಗಾಲ ಮೊಳಕಾಲ ಕೆಳಗೆ ಕಾಲು ಮುರಿದು ಸ್ಥಳದಲ್ಲಿಯೇ ಮೃತ ಪಟ್ಟಿರುತ್ತಾರೆ. ನೀವು ಅಪಘಾತ ಪಡಿಸಿ ವಾಹನವನ್ನು ಹಾಗೇ ಚಲಾಯಿಸಿಕೊಂಡು ಹೋಗುತ್ತಿದ್ದಾಗ ಸಾಕ್ಷಿ ನಂ.6 ರವರು ಬೆನ್ನಿಟ್ಟಿದಾಗ ಸ್ವಲ್ಪ ಮುಂದೆ ಹೋಗಿ ವಾಹನನ್ನು ನಿಲ್ಲಿಸಿ ಬಿಟ್ಟು ಹೋಗಿರುತ್ತೀರಿ ಅಂತಾ ನಿಮ್ಮ ಮೇಲೆ ಕಲಂ 279, 304(ಎ) ಐ.ಪಿ.ಸಿ. ಮತ್ತು ಕಲಂ 187 ಐ.ಎಮ್.ವಿ. ರ ಕಾಯ್ದೆ ಪ್ರಕಾರ ಅಪರಾದವೇಸಗಿದ್ದಿರಿ ಎಂದು ಅಪಾಧಿಸಲಾಗಿದೆ, ಈ ಮೇರೆಗೆ ನೀವೇನು ಹೇಳುತ್ತೀರಿ.

ಪ್ರಶ್ನೆ ಃ ಈ ಮೇಲೆ ಒದಿ ಹೇಳಿದ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರಃ ಆ.:-

ಪ್ರಶ್ನೆ ಃ ಸದರ ಆಪಾದನೆಗೆ ನೀನು ಒಪ್ಪುತ್ತಿಯಾ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ ಆ.:-

(ಆರೋಪಿಗೆ ಆಪಾದನೆಯ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಒದಿ ಹೇಳಿ ವ ಕೇಳಿ ಅವರು ಅದನ್ನು ತಿಳಿದುಕೊಂಡು ನಂತರ ಕೊಟ್ಟ ಉತ್ತರವನ್ನು ನಮೂದಿಸಲಾಯಿತು)

**ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ ಎಫ್ ಸಿ**

**ನ್ಯಾಯಾಲಯ, ಆಳಂದ.**